ಕರಿಅಜ್ಜ. ಬಿಳಿಅಜ್ಜ ಏನೋ ಗೊಣಗಿಕೊಂಡ. ‘ನೀನಿರಬೇಕಾದ್ರೆ ಯಾವ ದೆವ್ವ ಬರುತ್ತೆ? ನೀನೇ ಒಂದು ದೆವ್ವ’ ಎಂದು ಬಿಳಿಅಜ್ಜ ಹೇಳಿದ ಹಾಗೆ ಚಂದ್ರುವಿಗೆ ಅನಿಸಿತು. ಚಂದ್ರು ‘ರಾಮ ರಾಮ’ ಎನ್ನುತ್ತ ನಿದ್ದೆ ಹೋದ.

ಅದಾಗಿ ಹದಿನೈದು ದಿನವಾಗಿತ್ತು. ಚಂದ್ರೂಗೆ ಕ್ಲಾಸ್‌ಪರೀಕ್ಷೆ ಮುಗಿದು ರಜ ಬಂದಿತ್ತು. ಕರಿಅಜ್ಜ ಮಡ್ಡಿನಶ್ಯ ಏರಿಸಿ ಆ ದಿನ ಹೊರಗೆ ಹೋಗಲಿಲ್ಲ. ಹಿತ್ತಲಿಗೆ ಹೋಗಿ ಬದನೆ ಹಸಿಮೆಣಸು ತಿಂಗಳವರೆ ಗಿಡಗಳ ಬದಿಯಲ್ಲಿ ಕುತ್ತದಿಂದ ಅಗೆದು ಗೊಬ್ಬರ ಹಾಕುತ್ತಿದ್ದ ಚಂದ್ರು ತಿಪ್ಪೆಯಿಂದ ಗೊಬ್ಬರ ತಂದು ಕೊಡುತ್ತ ನಡುನಡುವೆ ಅಡಿಗೆಮನೆಗೆ ಹೋಗಿ ಒಣಕೊಬ್ಬರಿ, ಹಸಿಕೊಬ್ಬರಿ, ಉತ್ತತ್ತಿ, ಪುಟಾಣಿ ಏನನ್ನಾದರೂ ಮೇದು ಬರುತ್ತಿದ್ದ. ಹೀಗೆ ಮೇಯಲಿಕ್ಕೆ ಹೋದಾಗ ಅಜ್ಜಿ ಮತ್ತು ಬಿಳಿಅಜ್ಜ ಜಗಳವಾಡುತ್ತಿದ್ದ ಹಾಗೆ ಕಂಡಿತು. ಬಿಳಿಅಜ್ಜ ಹೇಳುತ್ತಿದ್ದ. ‘ಆ ಸೂಳೇಮಗನ್ನ ಇಲ್ಲಿ ತಂದು ಸೇರಿಸಿದವ್ಳೆ ನೀನು. ನಿನಗವ್ನ್ನಾ ಬೇಕಾಗಿದ್ರೆ ಹಾಳಾಗಿ ಹೋಗ್ಬೇಕಿತ್ತು. ಈಗ್ಲೂ ಕಟ್ಕೊಂಡು ಓಡ್ಹೋಗು.’ ‘ನಂಗೇನು ಬೇಕಾಗಿದೆ ಈಗ?’ ಎಂದಳು ಅಜ್ಜಿ ‘ನಾ ಯಾಕೆ ಕರ್ಕೊಬಂದೆ. ಅಂತ ಮಾಡಿದಿರಿ. ನೀವು ಊರಲ್ಲಿರಲಿಲ್ಲ. ಅವ್ನು ಸಾಯ್ತು ಬಿದ್ದಿದ್ದ. ತಂದೆ ಇಲ್ಲ ತಾಯಿ ಇಲ್ಲ. ಅಣ್ಣತಮ್ಮ ಮೊದಲೇ ಇಲ್ಲ. ಗೌಡ್ರು ಸಣ್ಣೆ ಬಂದು ಅಯ್ಯೋಪಾಪ ಅಂದ್ರು. ಏನೋ ಕಷ್ಟದಲ್ಲಿರೋವ್ನು ಅಂತ ಮನೆಗೆ ಕರ್ಕೊಂಬಂದೆ ಅಷ್ಟೆ.’

**ಬಿಳಿಅಜ್ಜ ಪಡಸಾಲೆಯಿಂದ ನಡುಮನೆಗೆ ಹೋಗುವ ಬಾಗಿಲಲ್ಲಿ ನಿಂತಿದ್ದ. ಕರಿಅಜ್ಜನ ನಗು ಬೆಳೆದ ಹಾಗೆ ಅವನ ತಾಳ್ಮೆಯೂ ಮೀರಿತು. ದೇವಸ್ಥಾನದಿಂದ ತಂದ ಎಣ್ಣೆಯೆಲ್ಲಾ ಅವನ ಕೈಯಲ್ಲಿತ್ತು. ಕೊನೆಗೆ ಬಿಳಿಅಜ್ಜ ಎಣ್ಣೆಥಾಲಿಯನ್ನು ಕರಿಅಜ್ಜನ ಕಡೆಗೆ ಎಸೆದ. ಹೊರಗೆ ಮಳೆ ಸುರಿಯುತ್ತಲೇ ಇತ್ತು. ಮಳೆಯ ಗಾಳಿಗೆ ಲಾಟೀನು ಬಗ್ ಎನ್ನುತ್ತಿತ್ತು.**

‘ಸಾಕು ಹಡ್ಬೆ. ಬಾಯಿ ಬಡೀಬ್ಯಾಡ. ಗುದ್ಬಿಟ್ಟೇನು’ ಎಂದು ಬಿಳಿಅಜ್ಜ ಮುಷ್ಟಿ ಕಟ್ಟಿ ಬಚ್ಚಬಾಯಲ್ಲಿ ಇಲ್ಲದ ಹಲ್ಲುಗಳನ್ನು ಕಟೆದ. ‘ನಿನ್ನ ವಿಷಯ ಊರಿಗೆಲ್ಲ ಗೊತ್ತಿದೆ. ಮಹಾಪತಿವ್ರತೆ ಹಾಗೆ ಮಾತಾಡ್ಬೇಡ’ ಎಂದು ಬಿಳಿಅಜ್ಜ ಗೊಣಗಿದ.

‘ಏನು, ಏನು ನನ್ವಿಷ್ಯ ಗೊತ್ತಿರೋದು’ ಎಂದಾಗ ಅಜ್ಜಿಯ ಮುಖ ಕೆಂಪಾಗಿತ್ತು. ಮೇಲ್ತುಟಿಯ ಮೇಲೆ ಮತ್ತು ಗಲ್ಲದ ಮೇಲೆ ಬೆಳೆದು ಚೂಪಾಗಿ ನಿಂತ ಬಿಳಿಕೂದಲು ಅಲುಗಾಡಿದವು. ‘ಯಾರು ನನ್ವಿಷ್ಯ ಮಾತಾಡ್ತಾರೆ ಅಂದೆ. ಸೀತಾರಾಮಯ್ಯನ ಹೆಂಡ್ತಿ ಲಚ್ಮನ್ನ ಇಟ್ಕೊಂಡಿಲ್ಲ ಅಂತ ಹೇಳ್ಲಿ. ಶಾನುಭೋಗ ವೆಂಕಟ್ರಮಣಯ್ಯ ಅವನ ತಂಗೀನೆ ಇಟ್ಕೊಂಡಿಲ್ವೇನು! ಕೇಶವ ಪೈ ಘಟ್ಟದ ತಗ್ಗಿನ ಹೊಲತೀನ್ನ ಹಾರಿಸ್ಕೊಂಡು ಬಂದಿದಾನೆ. ಎಲ್ಲರ ಮನೆದೋಸೇನೂ ತೂತೇ’ ಎಂದು ಅಜ್ಜಿ ಗೊಣಗಿದಳು.’ ‘ನಿನ್ನಿನ್ನಿನ್ನ!’ ಎಂದು ಬಿಳಿಅಜ್ಜ ವಸಡುಗಳನ್ನು ಕಚ್ಚಿಕೊಂಡ. ‘ನಿನ್ಮನೇಲಿ ಕಾವಲೀನೆ ತೂತು’ ಎಂದು ಉದ್ದ ಉಗುರಿನ ಬೆರಳುಗಳನ್ನು ಅಜ್ಜಿಯ ಮುಖಕ್ಕೆ ತಿವಿದ. ಅಜ್ಜಿಗೆ ಉಗುರು ನಾಟಿ ‘ಅಯ್ಯೊ’ ಎಂದಳು. ಅವಳಿಗೂ ರೇಗಿತ್ತು ‘ನಿಮ್